ಕವಿಗೋಷ್ಠಿಯಲ್ಲಿ 'ಪಂಜೆಯುಡುಗೆಯ ಮುದುಕ' ಕವಿತೆ ಓದಿದ್ದನ್ನು ಕೇಳಿದ ಅವರು ತಾವು ಇಳಿದುಕೊಂಡಿದ್ದ ಲಾಡ್ಜಿಗೆ ಕರೆಸಿ, ನನ್ನ ಕವಿತೆ ಪಡೆದು, ನನ್ನ ಬಗ್ಗೆ ಮತ್ತು ನನ್ನ ಕವಿತೆಯ ಕುರಿತು ತಮ್ಮ ಅಂಕಣವೊಂದರಲ್ಲಿ ಬರೆದರು. ನಾಟಕಕಾರ ಪರ್ವತವಾಣಿಯವರು ಇದಕ್ಕೆ ಸಾಕ್ಷಿಯಾಗಿದ್ದರು.

1990ರಲ್ಲಿ 'ಸುಧಾ' ವಾರ ಪತ್ರಿಕೆಯಲ್ಲಿ ನನ್ನ 'ಜಾಜಿಮಲ್ಲಿಗೆ' ಕವಿತೆ ಪ್ರಕಟವಾಯಿತು. ಅದನ್ನು ನೋಡಿದ ಬರಗೂರು ರಾಮಚಂದ್ರಪ್ಪ ಅವರು ಖುದ್ದಾಗಿ ಪತ್ರ ಬರೆದು – ಆ ಕವಿತೆಯನ್ನು ತರಿಸಿಕೊಂಡು ನಾಡಿನಾದ್ಯಂತ ಅವಕಾಶ ಕಲ್ಪಿಸಿದರು. ತಮ್ಮ ಜೊತೆ ಜೊತೆಯಲ್ಲಿ ಹೆಜ್ಜೆ ಹಾಕುವಂತೆ ಮಾಡಿದರು. ಹಂಪಿ, ಲಕ್ಕುಂಡಿ ಉತ್ಸವದಲ್ಲಿ ಕವಿತೆ ಕೇಳಿ ರಾಜಕಾರಣಿ ಎಂ.ಪಿ. ಪ್ರಕಾಶರು ವೇದಿಕೆ ಏರಿ ಕೈಕುಲುಕಿ, ಅಪ್ಪಿಕೊಂಡರು.'ಜಾಜಿಮಲ್ಲಿಗೆ' ಕವಿತೆ ಪಿ.ಯು.ಸಿ ದ್ವಿತೀಯ ವರ್ಷಕ್ಕೆ ಪಠ್ಯವಾಗಿ ನಾನೇ ಬೋಧಿಸುವಂತಾಯಿತು. ಅಲ್ಲಿಂದ ನಾನು 'ಜಾಜಿಮಲ್ಲಿಗೆ' ಕವಿಯಾದೆ. ಹಸಿವೇ ಕವಿತೆಯಾಯಿತು. ನೋವು ಅವಮಾನವೇ ಕವಿತೆಯಾಯಿತು. ಸಂಕಟ, ಕಣ್ಣೀರು ಕವಿತೆಯಾಯಿತು. ಕವಿತೆಯಿಂದಲೇ ಬದುಕು ಕಟ್ಟಿಕೊಂಡೆ ಹೀಗಾಗಿ ನಾನು ನನ್ನ ಕವಿತೆಗಳ ಅನುಸಂಧಾನದಲ್ಲಿ ಬದುಕುವಂತಾಯಿತು, ಬೆಳೆಯುವಂತಾಯಿತು.

ಹೀಗೆ ಕಡುಕಷ್ಟಗಳನ್ನು ಅನುಭವಿಸುತ್ತಾ ಕವಿತೆಯೊಂದಿಗಿನ ಅನುಸಂಧಾನದಲ್ಲಿ ಕಾಲು ಚಾಚಿ, ಕಾಲ ಕಳೆಯಬೇಕೆನ್ನುವಷ್ಟರಲ್ಲಿ ನಾನು ಕಂಡ ಸಾವುಗಳು ನನ್ನನ್ನು ಹೈರಾಣು ಮಾಡಿದವು. ಸುಖವನ್ನು ಕನಸಿನಲ್ಲೂ ಕಾಣದ ನನ್ನ ಅಪ್ಪ ಹೊಟ್ಟೆ ತುಂಬ ತಿಂದು ನಾಲ್ಕು ಕಾಲ ಕಳೆಯಬೇಕಿರುವ ಹೊತ್ತಿನಲ್ಲಿ ಕೊನೆಯ ಮಗನ ತಲೆಯ ಮೇಲೆ ನಾಲ್ಕು ಕಾಳು ಅಕ್ಷತೆ ಹಾಕದೆ ಕಣ್ಮುಚ್ಚಿದ. ಸರಕಾರ ಕೊಟ್ಟ ಜಮೀನು ಹಸಿರಾಗುವುದನ್ನು ಅವನು ಕಾಣಲೇ ಇಲ್ಲ. ಆತನ ಅಗಲಿಕೆಯ ನೋವು ಮರೆಯುವಷ್ಟರಲ್ಲಿ ಕೊನೆಯ ತಮ್ಮ ಮೂರು ಹಸುಗೂಸುಗಳನ್ನು ಬಿಟ್ಟು ನಡದೇ ಬಿಟ್ಟ. ಆ ನೋವಿನಿಂದ ಹೊರ ಬರುವಷ್ಟರಲ್ಲಿ ಇನ್ನೊಬ್ಬ ತಮ್ಮ ದೂರವಾದ. ಆಗ ದಿಕ್ಕೆಟ್ಟೆ, ಅಸಹಾಯಕನಾದೆ. ನೋಡಿದತ್ತ ನರಕಯಾತನೆ. ಕಣ್ಬಿಟ್ಟತ್ತ ಕತ್ತಲು, ಸಂಕಟ, ನೋವು, ನಿರಾಶೆ... ಮತ್ತೆ ಎದ್ದು ನಿಂತೆ, ನಡೆದೆ. ಎಲ್ಲವನ್ನೂ ನುಂಗಿ ಹಿಮ್ಮೆಟ್ಟಿಸಿ, ಅಗಲಿದ ಸೋದರರ ಕುಟುಂಬಗಳನ್ನು ಹೊಸ ನೆಲೆಗೆ ತಂದು ನಿಲ್ಲಿಸುವಷ್ಟರಲ್ಲಿ ಹೈರಾಣಾದೆ. ಹೊಕ್ಕಳು ಬಳ್ಳಿಗಳನ್ನು ಕಳೆದುಕೊಂಡ ನನ್ನವ್ವ ಮುದುಡಿದಳು, ಕೊರಗಿದಳು. ಒಳಗೊಳಗೆ ನೊಂದಳು. ಅವಳೂ ಒಂದು ದಿನ ಹೊರಟುಹೋದಳು. ನಾಲ್ಕಕ್ಷರ ಕಲಿಯಲು ಆಶ್ರಯ ನೀಡಿ, ಆಸರೆಯಾಗಿದ್ದ ಅಕ್ಕ ಇತ್ತೀಚೆಗೆ ಕಣ್ಮುಚ್ಚಿದಳು. ಜೀವನದಲ್ಲಿ ಎದುರಾದ ತವಕ, ತಲ್ಲಣಗಳನ್ನು ಹೊರಗಿಟ್ಟು ಕವಿತೆ ಬರೆಯುವುದು ಅಸಾಧ್ಯವೆಂಬ ವಿಚಾರ ಕಾಡಿತು. ಅದು ಕವಿತೆಯಾಯಿತು. ಊಟಕ್ಕೂ ಪರದಾಡಿದ, ಮೈ–ಮಾನ ಮುಚ್ಚಿಕೊಳ್ಳಲು ಹಲುಬಿದ ನನಗೆ ನನ್ನ ಕಾವ್ಯ ಆಶ್ರಯ ನೀಡಿ ಪೋಷಿಸಿ ಬೆಳೆಸಿದೆ. ಸುಖ, ಸಂತೋಷ, ದುಃಖವನ್ನು ನೀಡಿದೆ. ಇದಕ್ಕಿಂತ ಮಿಗಿಲಾಗಿ ನನ್ನನ್ನು ವಿನೀತನನ್ನಾಗಿಸಿದೆ. ಕಾವ್ಯದ ಕೆಲಸ ಇದೇ ಅಲ್ಲವೇ? ಕಾವ್ಯಕ್ಕೆ ತನ್ನದೇ ಆದ ಶಕ್ತಿ, ಸಾಮರ್ಥ್ಯ ಇದೆ ಎಂಬುದನ್ನು ನನ್ನಂಥವನಿಗೆ ತೋರಿಸಿ ಮನಸ್ಸುಗಳ ತಟ್ಟಲು, ಕಟ್ಟಲು, ಕನಸುಗಳ ಚಿಗುರಿಸಲು ಕೊಂಡಿಯಾಗಿ, ಸೆಲೆಯಾಗಿ ನನ್ನೊಳಗಿನ ಪ್ರೀತಿಯ ಬಳ್ಳಿಯನ್ನು ಸುತ್ತಲೂ ಹಬ್ಬಿಸಲು ನನ್ನ ಮಿತಿಯಲ್ಲಿ ಪ್ರಯತ್ನಿಸಿದ್ದೇನೆ. ಬಂಡೆಗಲ್ಲಿನ ಬುಡದಲ್ಲಿಯ ಕರಕಿಯಂತೆ ಹೇಗಾದರೂ ಚಿಗುರಬೇಕೆನ್ನುವ ಕನಸಿನಂತೆ ನಾನು ಮತ್ತು ನನ್ನ ಕವಿತೆ. ಆ ಮುಖೇನ ಮನುಷ್ಯರನ್ನು ಹುಡುಕಲು ಪ್ರಯತ್ನಿಸಿದ ನಾನು, ನಾನಾಗಿದ್ದೇನೆ.

◆ ಬಂಡಾಯ ಕವಿ ಎಂದೇ ನಿಮ್ಮನ್ನು ಗುರುತಿಸುತ್ತಾರೆ. ಬಂಡಾಯ ಸಾಹಿತ್ಯದತ್ತ ಅಥವಾ ಬಂಡಾಯ ಮನೋಭಾವದತ್ತ ಸೆಳೆಯಲ್ಪಟ್ಟಾಗ ನಿಮಗೆ ಇದ್ದ ಪ್ರೇರಣೆ, ಆಕರ್ಷಣೆಗಳೇನು?